ಸಾಮರ್ಥ್ಯ. :- 873 ಸಂ. 66000 MT 3) ಗ್ರಾಮೀಣ ಗೋದಾಮುಗಳ ಸಂಖ್ಯೆ ಮತ್ತು ಸಾಮರ್ಥ್ಯ---3ಸಂ	ಅದರೆ ಸಮಿತಿಯು ನಿರ್ಮಿಸಿರುವ ಕಟ್ಟಡದಲ್ಲಿ ಎರಡು ಖಾಸಗಿ ಶೀಥಲಗಾರಗಳು ಇದ್ದು ನೆಲ ಬಾಡಿಗೆ ಆಧಾರದ ಮೇಲೆ ನೀಡಲಾಗಿರುತ್ತದೆ. ಚೇತನ ಶೀಥಲಗೃಹ ಸಾಮರ್ಥ್ಯ- 1200 MT ಕಾವೇರಿ ಶೀಥಲಗೃಹ ಸಾಮರ್ಥ್ಯ- 1200 MT

ವಿಷಯ: ಗ್ರೇಡಿಂಗ್, ಪ್ಯಾಕಿಂಗ್, ಉಗ್ರಾಣ, ಶೈತಾಗಾರಗಳ ನಿರ್ಮಾಣ

4657 (5421) : ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತರ ಉತ್ಪನ್ನಗಳ ಸಂಸ್ಕರಣ, ಗ್ರೇಡಿಂಗ್, ಪ್ಯಾಕಿಂಗ್, ಉಗ್ರಾಣ ಮತ್ತು ಶೈತ್ಯಾಗಾರಗಳನ್ನು ನಿರ್ಮಿಸಿ ಲಾಭದಾಯಕ ಬೆಲೆ ಸಿಗುವಂತೆ ಸಹಾಯ ಮಾಡುವ ಯೋಜನೆಗಳು ಇವೆಯೇ: (ವಿವರ ನೀಡುವುದು)

ಆ) ಕೇಂದ್ರ ವಿವಿಧ ಸಂಸ್ಥೆಗಳಿಂದ ರೈತರ ಉತ್ಪನ್ನಗಳ ಮಾರಾಟ ಮತ್ತು ವಿದೇಶಗಳಿಗೆ ರಫ್ತಿಗೆ ಸಹಾಯ ಮಾಡುವ ಯೋಜನೆಗಳು ಇವೆಯೇ: ವಿವರ ನೀಡುವುದು:

ಇ) ರಾಜ್ಯ ಕೇಂದ್ರ ಮತ್ತು ಎನ್.ಹೆಚ್.ಬಿ ಹಾಗೂ ಎನ್.ಡಿ.ಡಿ.ಬಿ. ಯಂತಹ ಅನೇಕ ಸಂಸ್ಥೆಗಳು ಹಣಕಾಸಿನ ಸಹಾಯ ಮಾಡುವ ವಿವರ ನೀಡುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ಇದೆ.

1. ರೈತರ ಉತ್ಪನ್ನ ಸಂಸ್ಕರಣಕ್ಕಾಗಿ ಸಂಸ್ಕರಣಾ ಘಟಕ ಸ್ಥಾಪಿಸಲು ಮಾರುಕಟ್ಟೆ ಪ್ರಾಂಗಣದಲ್ಲಿ ನವೇಶನಗಳನ್ನು ನೀಡಿ ಪ್ರೋತ್ಸಾಹ ನೀಡಲಾಗುತ್ತಿದೆ.

2. ರಾಜ್ಯದಲ್ಲಿ 44 ಪ್ರಾಥಮಿಕ ವರ್ಗೀಕರಣ ಕೇಂದ್ರಗಳ ಮೂಲಕ ರೈತರ ಕೃಷಿ ಉತ್ಪನ್ನಗಳನ್ನು ತರಬೇತಿ ಪಡೆದ ವರ್ಗೀಕರಣದಾರರಿಂದ ಗ್ರೇಡಿಂಗ್ ಮಾಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

3. ಪ್ಯಾಕಿಂಗ್ ಬಗ್ಗೆ ರೈತರಿಗೆ ತರಬೇತಿ ನೀಡಿ ಕೃಷಿ ಉತ್ಪನ್ನಗಳನ್ನು ಪ್ಯಾಕಿಂಗ್ ಮಾಡಿ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡುವಂತೆ ರೈತರಿಗೆ ಮನವರಿಕೆ ಮಾಡಿಕೊಡಲಾಗುತ್ತಿದೆ.

4. ಮಾರುಕಟ್ಟೆ ಪ್ರಾಂಗಣಗಳಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಉಗ್ರಾಣಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಿ ರೈತರ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಲು ಅನುಕೂಲ ಮಾಡಲಾಗಿದೆ. ಎ.ಪಿ.ಎಂ.ಸಿ.ಗಳಿಂದ ಕೂಡಾ ಉಗ್ರಾಣಗಳನ್ನು ನಿರ್ಮಿಸಿ ಮಾರುಕಟ್ಟೆ ಪ್ರಾಂಗಣಗಳಲ್ಲಿ ಅಲ್ಲದೇ ಗ್ರಾಮಾಂತರ ಪ್ರದೇಶಗಳಲ್ಲಿಯೂ ವ್ಯವಸ್ಥೆ ಕಲ್ಪಿಸಿ ಕೊಡಲಾಗಿದೆ.

5. ಬೆಂಗಳೂರು ಹಾಗೂ ಬೆಳಗಾಂ ಮಾರುಕಟ್ಟೆ ಪ್ರಾಂಗಣದಲ್ಲಿ ಶೈತ್ಯಾಗಾರ ಹೊಂದಲು ಅವಕಾಶ ನೀಡಿ ರೈತರ ತೋಟಗಾರಿಕಾ ಉತ್ಪನ್ನಗಳನ್ನು ಸಂಗ್ರಹಿಸಲು ವ್ಯವಸ್ಥೆ ಮಾಡಲಾಗಿದೆ. ಚಿಂತಾಮಣಿ ಹಾಗೂ ಚಿಕ್ಕಾಬಳ್ಳಾಪುರ ಮಾರುಕಟ್ಟೆ ಸಮಿತಿಗಳ ವತಿಯಿಂದಲೇ ಶೈತ್ಯಾಗಾರ ನಿರ್ಮಿಸಲಾಗಿದೆ.

ಅ) ಇದೆ. ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಇದೆ. ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ರಾಷ್ಟ್ರೀಯ ತೋಟಗಾರಿಕಾ ಮಂಡಳಿ (National Horticultural Board) N.H.B.

ರಾಷ್ಟ್ರೀಯ ತೋಟಗಾರಿಕಾ ಮಂಡಳಿ (National Horticultural Board) N.H.B ಯು ಭಾರತ ಸರ್ಕಾರದ ಅಧೀನದ ಒಂದು ಸಂಸ್ಥೆ

ಪ್ರಧಾನ ಕಾರ್ಯಲಯ:–

ಎಕ್ಸಿಕ್ಯೂಟೀವ್ ಡೈರೆಕ್ಟರ್
ರಾಷ್ಟ್ರೀಯ ತೋಟಗಾರಿಕಾ ಮಂಡಳಿ
ನಂ. 442ಃ14, ಸೆಕ್ಟರ್
ಪೋಸ್ಟ್ ಬಾಕ್ಸ್ ನಂ. 62,
ಗುರುಗಾಂವ್

Executive Director
National Horticultural Board
No. 442/14, Sector,
P.B.No. 62,
Gurgoav-122001.

ಕರ್ನಾಟಕ ಕಾರ್ಯಲಯ:–

ಸಹಾಯಕ ನಿರ್ದೇಶಕರು (ಮಾರುಕಟ್ಟೆ)
ರಾಷ್ಟ್ರೀಯ ತೋಟಗಾರಿಕಾ ಮಂಡಳಿ
ಪೆಚ್.ನಂ. 149,
2ನೇ ಮಹಡಿ, 5ನೇ ಮುಖ್ಯ ರಸ್ತೆ
ಕೃ.ಉ.ಮಾ.ಸ.ಯಾರ್ಡ್,
ಯಶವಂತಪುರ,
ಬೆಂಗಳೂರು–560022.

1. ಯೋಜನಾ ಸಾಧ್ಯತಾ ಅಧ್ಯಯನಗಳು, ಸಮೀಕ್ಷೆಗಳು, ಸಲಹೆ ಮತ್ತು ಆಧಾರ ಮಾಹಿತಿ (ದತ್ತ ಮಾಹಿತಿ) ಉನ್ನತೀಕರಣ.

2. ಸೌಕರ್ಯ ಹಾಗೂ ಸೌಲಭ್ಯಗಳ ಅಭಿವೃದ್ಧಿ ಯೋಜನೆ ಹಾಗೂ ಆರ್ಥಿಕ ನೆರವು.

3. ರಫ್ತು ಉತ್ತೇಜನ ಮತ್ತು ಮಾರುಕಟ್ಟೆ ಅಭಿವೃದ್ಧಿ ಯೋಜನೆ ಹಾಗೂ ಆರ್ಥಿಕ ನೆರವು

4. ಪ್ಯಾಕೇಜಿಂಗ್ ಅಭಿವೃದ್ಧಿಗಾಗಿ ಯೋಜನೆ ಹಾಗೂ ಆರ್ಥಿಕ ನೆರವು.

5. ಗುಣಮಟ್ಟಕ್ಕೆ ಉತ್ತೇಜನ ಹಾಗೂ ಗುಣ ನಿಯಂತ್ರಣಾ ಕಾರ್ಯಗಳಿಗೆ ನೆರವಿನ ಯೋಜನೆ.

6. ಮಾರುಕಟ್ಟೆ ಸಮಿತಿ ಸಂಸ್ಕರಣಾ ಘಟಕಗಳನ್ನು ಉನ್ನತೀಕರಣಗೊಳಿಸುವುದಕ್ಕಾಗಿ ಯೋಜನೆ.

7. ಸುವ್ಯವಸ್ಥಿತ ಸಂಘಟನೆ ರಚನೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ.

8. ವ್ಯಾಪಾರ ಹಾಗೂ ಕೈಗಾರಿಕೆಯ (ಉದ್ದಿಮೆಯ) ಸರ್ವಸಮಬಲವಾದ ಲಾಭದ ಸಲುವಾಗಿ ಲಿಪೇಡಾದ ಮೂಲಕ ಸಂಶೋಧನಾ ಸಂಸ್ಥೆಗಳ ಸಹಯೋಗದೊಂದಿಗೆ ಸಂಗತವಾದ ಸಂಶೋಧನೆಯನ್ನು ವಿಕಾಸಗೊಳಿಸುವ ಯೋಜನೆ.

ಆಹಾರ ಸಂಸ್ಕರಣಾ ಸಚಿವಾಲಯ (Food Processing Industry) ಯು ಭಾರತ ಸರ್ಕಾರದ ಒಂದು ಸಂಸ್ಥೆ.

ಪ್ರಧಾನ ಕಾರ್ಯಾಲಯ :

ನಿರ್ದೇಶಕರು,

ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವಾಲಯ,

ಪಂಚಶೀಲ ಭವನ,

ಆಗಸ್ಟ್ ಕ್ರಾಂತಿ ಮಾರ್ಗ

ನವದೆಹಲಿ–110049

ದೂರವಾಣಿ : 011–6492216?6492174/6493227

ಫ್ಯಾಕ್ಸ್ – 011 – 6492216/6493012

ರಾಜ್ಯದ ಸಮನ್ವಯ ಅಧಿಕಾರಿಗಳು:

ಕರ್ನಾಟಕ ರಾಜ್ಯ ತಾಂತ್ರಿಕ ಹಾಗೂ ಸಲಹಾ ಸೇವಾ ಸಂಸ್ಥೆ

ಕೈಗಾರಿಕೆಗಳ ಹಾಗೂ ವಾಣಿಜ್ಯ ನಿರ್ದೇಶನಾಲಯ,

ರಾಷ್ಟ್ರೋತ್ಥಾನ ಪರಿಷತ್ ಭವನ,

ನೃಪತುಂಗ ರಸ್ತೆ,

ಬೆಂಗಳೂರು – 560002

ದೂರವಾಣಿ – 080 – 2266134

ನೀಡುವ ಸೇವೆಗಳು ಹಾಗೂ ಸೌಲಭ್ಯಗಳು

1. ಸೌಕರ್ಯ ಹಾಗೂ ಸೌಲಭ್ಯಗಳ ಮತ್ತು ಕೈಗಾರಿಕಾ (ತಯಾರಿಕಾ) ಘಟಕಗಳ ಸ್ಥಾಪನೆ ಹಾಗೂ ಆರ್ಥಿಕ ನೆರವು.

2. ಸಂಶೋಧನೆ ಹಾಗೂ ಅಭಿವೃದ್ಧಿ ಯೋಜನೆಗಳು ಹಾಗೂ ಆರ್ಥಿಕ ನೆರವು.

3. ಆಹಾರ ಸಂಸ್ಕರಣಾ ಮತ್ತು ತರಬೇತಿಗಾಗಿ ಆರ್ಥಿಕ ನೆರವು.

4. ಪ್ರದರ್ಶನ : ಮೇಳ : ಚರ್ಚಾಗೋಷ್ಟಿ ವ್ಯವಸ್ಥೆಗಾಗಿ ಆರ್ಥಿಕ ನೆರವು.

ನೀಡುವ ಸೇವೆಗಳು ಹಾಗೂ ಸೌಲಭ್ಯಗಳು:-

1. ತೋಟಗಾರಿಕಾ ಮಾಹಿತಿ ಸೇವೆ (ಮಾಸಿಕ ಪ್ರಕಟಣೆ)
2. ಹಣ್ಣು ತರಕಾರಿ ಹಾಗೂ ಹೂ.ಗಳ ಅಂತರಾಷ್ಟ್ರೀಯ ಬೆಲೆಗಳು (ITC ಜಿನೀವಾದಿಂದ)
3. ತೋಟಗಾರಿಕಾ ಕ್ಷೇತ್ರದಲ್ಲಿ ನವೀನ ತಾಂತ್ರಿಕತೆಗಳ ಅಳವಡಿಕೆ ಹಾಗೂ ಹಣಕಾಸು ಸಹಾಯ
4. ಗ್ರಾಮೀಣ ಕ್ಷೇತ್ರದಲ್ಲಿ ಪೋಷಕಾಂಶಯುಕ್ತ ತೋಟಗಳ ಸ್ಥಾಪನೆ ಯೋಜನೆ.
5. ಹಣ್ಣಿನ ರಸ/ಹಣ್ಣು ಆಧಾರಿತ ಪಾನೀಯಗಳ ಮಾರಾಟಕ್ಕೆ ಸಂಬಂಧಿಸಿದಂತೆ ಅನ್ಯಮಾರಾಟ ವಿನ್ಯಾಸ ಯೋಜನೆ ಹಾಗೂ ಹಣಕಾಸು ಸಹಾಯ.
6. ತೋಟಗಾರಿಕಾ ಉತ್ಪನ್ನಗಳ ಉತ್ಪಾದಕರನ್ನು ಸಂದರ್ಶಿಸುವ ಹಾಗೂ ತರಬೇತಿ ನೀಡುವ ಮೂಲಕ ತಂತ್ರಜ್ಞಾನ ವರ್ಗಾವಣೆ ಯೋಜನೆ.
7. ತೋಟಗಾರಿಕೆಗೆ ಸಂಬಂಧಿಸಿದಂತೆ ಕೈಗೊಳ್ಳಬಹುದಾದ ವಿವಿಧ ಅಧ್ಯಯನಗಳು ಹಾಗೂ ಸಮೀಕ್ಷೆ ಯೋಜನೆ.
8. ಮೇಳ/ಪ್ರದರ್ಶನ/ಚರ್ಚೆಗೋಷ್ಠಿ/ಕಮ್ಮಟ/ಸಮ್ಮೇಳನ ಇತ್ಯಾದಿಗಳ ಮೂಲಕ ತೋಟಗಾರಿಕಾ ಅಭಿವೃದ್ಧಿಯ ಸಲುವಾಗಿ ವೃತ್ತಿ ನಿರತ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡುವಿಕೆ.

ಕೃಷಿ ಹಾಗೂ ಸಂಸ್ಕರಿಸಲ್ಪ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (Agricultural and Processed Food Products Export Development Authority) APEDA

ಕೃಷಿ ಹಾಗೂ ಸಂಸ್ಕರಿಸಲ್ಪಟ್ಟ ಆಹಾರ ಉತ್ಪನ್ನ ರಫ್ತು ಅಭಿವೃದ್ಧಿ ಪ್ರಾಧಿಕಾರ (Agricultural and processed Food Products Export Development Authority) APEDA ಭಾರತ ಸರ್ಕಾರದ ಒಂದು ಸಂಸ್ಥೆ.

ಪ್ರಧಾನ ಕಾರ್ಯಾಲಯ:-

ಎಕ್ಸಿಕ್ಯೂಟೀವ್ ಡೆರೆಕ್ಟರ್
Agricultural and Processed Food Products
Export Development Authority
IV Floor, Bhikaji Coama Place
NEW DELHI - 110006
Phone No. 6872141, 6887211148,
Fax No. 011-68775016

ಕರ್ನಾಟಕದ ಕಾರ್ಯಾಲಯ
ಸಹಾಯಕ ನಿರ್ದೇಶಕರು
ಲಿಪೇಡಾ, ನಂ.12/1/1
ಪ್ಯಾಲೇಸ್ ಕ್ರಾಸ್ ರಸ್ತೆ ಬೆಂಗಳೂರು-560020
ದೂರವಾಣಿ-080-3343425, 3368272

ನೀಡುವ ಸೇವೆಗಳು ಹಾಗೂ ಸೌಕರ್ಯಗಳು

ಕೆಪೆಕ್ Karnataka state Agricultural Produce Processing and Export Corporation Limited

ಪ್ರಧಾನ ಕಾರ್ಯಲಯಃ

Managing Director,
Karnataka State Agril Produce
Processing and Export corporation Ltd.
No.16, Richmond Road,
Bangalore - 560025.

ದೂರವಾಣಿ ಃ 2271194

ಫ್ಯಾಕ್ಸ್ ಃ 080 – 2278974

ನೀಡುವ ಸೇವೆಗಳು ಹಾಗೂ ಸೌಕರ್ಯ ಃ

1. ಕೃಷಿ, ತೋಟಗಾರಿಕೆ ಹಾಗೂ ಹೂವುಗಳು ರಫ್ತು ಮಾಡಲು ಉತ್ತೇಜನ ನೀಡುವುದು.

2. ಕೃಷಿ, ತೋಟಗಾರಿಕೆ ಹಾಗೂ ಹೂವುಗಳ ರಫ್ತಿಗೆ ಬೇಕಾದ ಮೂಲಭೂತ ಸೌಕರ್ಯಗಳ ಸ್ಥಾಪನೆ ಹಾಗೂ ನಿರ್ವಹಣೆ.

3. ರಫ್ತು ಮಾಡುವ ಉತ್ಪನ್ನಗಳಿಗೆ ರೈತರಿಗೆ ತರಬೇತಿ ನೀಡಿ ರಫ್ತ ಯೋಗ್ಯ ಉತ್ಪನ್ನಗಳನ್ನು ಉತ್ಪಾದಿಸುವಂತೆ ಮಾಡುವುದು ಹಾಗೂ ರಫ್ತು ಕಾರ್ಯನಿರ್ವಹಣೆ

4. ಹೊರದೇಶಗಳಲ್ಲಿ ನಡೆಯುವ ಪ್ರದರ್ಶನ ಹಾಗೂ ಮೇಳಗಳಲ್ಲಿ ರೈತರನ್ನು ಭಾಗವಹಿಸುವಂತೆ ಮಾಡುವುದು.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ರಫ್ತು ವಿಭಾಗವು ಒಂದು ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ.

ಕಾರ್ಯಲಯಗಳು ಃ

1. ಉಪ ಪ್ರಧಾನ ವ್ಯವಸ್ಥಾಪಕರು,
   ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ,
   ರಫ್ತು ಘಟಕ, ದಕ್ಷಿಣ ವಲಯ,
   ನಂ.16, 11 ನೇ ರಾಜಭವನ ರಸ್ತೆ,
   ಬೆಂಗಳೂರು.

2. ಉಪ ಪ್ರಧಾನ ವ್ಯವಸ್ಥಾಪಕರು
   ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ,
   ರಫ್ತು ಘಟಕ, ಉತ್ತರ ವಲಯ,
   ಬಿಜಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣ,
   ಬಿಜಾಪುರ.

ನೀಡುವ ಸೇವೆಗಳು ಹಾಗೂ ಸೌಕರ್ಯಗಳುಃ

1. ರಫ್ತು ಸಂಬಂಧವಾದ ಮಾಹಿತಿಯನ್ನು ರೈತರಿಗೆ ಹಾಗೂ ರಫ್ತುದಾರರಿಗೆ ನೀಡುವುದು.

2. ರಫ್ತು ಉತ್ತೇಜನ ಕಾರ್ಯ ನಿರ್ವಹಣೆಯಲ್ಲಿ ಪೂರಕ ಸಂಘ-ಸಂಸ್ಥೆಗಳಿಗೆ ಸಲಹೆ ಮಾರ್ಗದರ್ಶನ ಹಾಗೂ ಆರ್ಥಿಕ ನೆರವು ನೀಡುವುದು.

3. ಕೊಯ್ಲು ನಂತರ ತಂತ್ರಜ್ಞಾನ ತರಬೇತಿ ನೀಡಿ ರಫ್ತಿಗೆ ಉತ್ತೇಜನ ನೀಡುವುದು.

4. ಹೊರ ರಾಜ್ಯ ಹಾಗೂ ದೇಶಗಳಿಗೆ ಭೇತಿ ನೀಡಿ ರಫ್ತಿನ ಬಗ್ಗೆ ರೈತರಿಗೆ ಹಾಗೂ ರಫ್ತುದಾರರಿಗೆ ಪ್ರೋತ್ಸಾಹ ನೀಡುವುದು.

ಗಾಜನೂರು ತುಂಗಾ ಮೇಲ್ದಂಡೆ ಯೋಜನೆಯ ಸಲಹಾ ಸಮಿತಿಗೆ ಶಾಸಕರನ್ನು

4658 (5200) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ (ಶಿವಮೊಗ್ಗ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಗಾಜನೂರು ತಂಗಾ ಮೇಲ್ದಂಡೆ ಯೋಜನೆ ಸಲಹಾ ಸಮಿತಿಗೆ ಶಾಸಕರನ್ನೊಳಗೊಂಡ ಸಮಿತಿ ರಚಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)

ಆ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ತುಂಗಾ ಎಡನಾಲೆ ಹಾಗೂ ಬಲನಾಲೆಗಳ ಚಾನಲ್ ರಸ್ತೆ ಕಾಮಗಾರಿಗೆ ಹಣ ಬಿಡುಗಡೆಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಚಾನಲ್‌ಗಳ ಸಿಲ್ಟ್ ತೆಗೆಯಲು ಸರ್ಕಾರದ ವತಿಯಿಂದ ಜೆ.ಸಿ.ಬಿ. ಹಾಗೂ ಕೆಲವು ಅಗತ್ಯ ಯಂತ್ರೋಪಕರಣಗಳನ್ನು ಖರೀದಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಇಲ್ಲ.

ಆ) ತುಂಗಾ ಅಚ್ಚುಕಟ್ಟು ಪ್ರದೇಶದಲ್ಲಿ 131.30 ಕಿಮೀ.ಗಳ ಆಯಕಟ್ಟು ರಸ್ತೆ ಇದ್ದು ಇವುಗಳ ನಿರ್ವಹಣೆ ಹಾಗೂ ದುರಸ್ತಿ ಕಾಮಗಾರಿಗಳಿಗೆ ರೂ. 13.00 ಲಕ್ಷ ಅನುದಾನ ಒದಗಿಸಲಾಗಿದೆ. ಕಾಮಗಾರಿಗೆ ಅವಶ್ಯವಿರುವ ಹೆಚ್ಚುವರಿ ಅನುದಾನದ ಕುರಿತು ಮುಂದಿನ ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಇರುವುದಿಲ್ಲ.

ರಾಜ್ಯದಲ್ಲಿ ಬೆಳೆ ವಿಮೆ

4659 (5364) : ಶ್ರೀ ಶ್ರೀ ಗುಡ್ಡದೇವರ ಗದ್ದಯ್ಯ ಶಿಮೂರ್ತಯ್ಯ (ಶಿರಹಟ್ಟಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ವರ್ಷದ ಮುಂಗಾರು ಹಾಗೂ ಹಿಂಗಾರು ಬೆಳೆಗಳಿಗೆ ವಿಮೆ ಮಂಜೂರಾಗಿದೆಯೇ?

ಆ) ಮಂಜೂರಾಗಿದ್ದಲ್ಲಿ, ಯಾವಾಗ ವಿತರಿಸಲಾಗುವುದು?

ಇ) ವಿಮಾ ಮಂಜೂರಾತಿ ಮಾಡುವಲ್ಲಿ ಸರ್ಕಾರ ಅನುಸರಿಸುತ್ತಿರುವ ಮಾನದಂಡವೇನು? (ವಿವರ ನೀಡುವುದು)

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) 2002ರ ಮುಂಗಾರು ಹಂಗಾಮಿನ ಆ ಬೆಳೆಗಳಾದ ಜೋಳ, ರಾಗಿ, ಸಜ್ಜೆ, ತೊಗರಿ, ಸೋಯಾ ಅವರೆ, ಉದ್ದು, ಹೆಸರು ಸೂರ್ಯಕಾಂತಿ ಮತ್ತು ಎಳ್ಳು ಇವುಗಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಿರುತ್ತದೆ. ಉಳಿದ 5 ಬೆಳೆಗಳಾದ ಭತ್ತ ಮುಸುಕಿನ ಜೋಳ, ನೆಲೆಗಡಲೆ (ಶೇಂಗಾ), ಆಲೂಗೆಡ್ಡೆ ಮತ್ತು ಈರುಳ್ಳಿ ಇವುಗಳಿಗೆ ಭಾರತೀಯ ಸಾಮಾನ್ಯ ವಿಮಾ ನಿಗಮವು ತನಿಖೆಗಾಗಿ ಅಗ್ರಿಕಲ್ಚರ್ ಫೈನಾನ್ಸ್ ಕಾರ್ಪೋರೇಷನ್ ಸಂಸ್ಥೆಗೆ ವಹಿಸಿರುತ್ತದೆ ವರದಿ ಬ ಂದ ನಂತರ